ಕಿರಿದಾಗಿಸಿಕೊಂಡು ನಂದಕಿಶೋರನನ್ನು ನೋಡಿದ. 'ನಾನು ಬಂದದ್ದು ಯಾಕೆಂದು ತಿಳಿಯಿತಲ್ಲ?' ಎಂಬಂತೆ.

'ನಿಮಗೂ ಒಂದು ಪ್ಲೇಟು ಗೋಳಿಬಜೆ ಹೇಳಲೆ?' ಎಂದು ನಂದಕಿಶೋರ ಕೇಳಿದ. ಪರಿಚಿತನೊಬ್ಬ ಎದುರಿಗಿದ್ದಾಗ ತಾನೊಬ್ಬನೇ ತಿನ್ನುವುದು ಹೇಗೆ ಎಂದು ಅವನಿಗೆ ಸಂಕೋಚವಾಗಿತ್ತು.

ರಾಜ ಅವನಿಗೆ ಉತ್ತರ ಹೇಳದೆ ಸಪ್ಲಯರ್ ವಸಂತನನ್ನು ಸನ್ನೆ ಮಾಡಿ ಕರೆದು 'ತಿಂಡಿ ಏನಿದೆ?' ಎಂದು ಕೇಳಿದ.

ವಸಂತ, 'ಸಾದಾ, ಮಸಾಲೆ, ಉತ್ತಪ್ಪ, ಗೋಳಿಬಜೆ, ಬನ್ಸ್, ಬಿಸ್ಕುಟಂಬಡೆ...' ಎಂದು ಹೇಳಿದ.

'ಒಂದು ಮಸಾಲೆ....' ಎಂದು ಹೇಳಿದ ರಾಜ, ಅವನು ಹಿಂದಿರುಗುತ್ತಿರುವಂತೆ, 'ಈಗ ಒಂದು ಪ್ಲೇಟ್ ಗೋಳಿಬಜೆ ಕೊಡು. ಹಳ್ಳಿಯ ಹೋಟೆಲುಗಳಲ್ಲಿ ಗೋಳಿಬಜೆ ಚೆನ್ನಾಗಿ ಮಾಡುತ್ತಾರೆ' ಎಂದ.

ಗೋಳಿಬಜೆ ಬಂತು. ನಂದಕಿಶೋರ ನಡುವೆ ಎದ್ದು ಹೋಗಿ ವಸಂತನ ಕಿವಿಯಲ್ಲಿ ಏನೋ ಪಿಸುಮಾತಿನಲ್ಲಿ ಹೇಳಿ ಬಂದು ತನ್ನ ಸೀಟಿನಲ್ಲಿ ಕುಳಿತ. ರಾಜ ಸಿಗರೇಟು ಸೇದಿ ಮುಗಿಸಿ ಗೋಳಿಬಜೆ ತಟ್ಟೆಯನ್ನು ಬಳಿಗೆ ಎಳೆದುಕೊಂಡ. ಇಬ್ಬರೂ ಮಾತಾಡದೆ ಗೋಳಿಬಜೆ ತಿಂದು ಮುಗಿಸಿದರು.

ರಾಜನ ಎದುರಿಗೆ ಮಸಾಲೆ ದೋಸೆಯ ತಟ್ಟೆ ಬಂದು ಕುಳಿತಾಗ ಅವನು ಹಸಿದವನಂತೆ ಅದಕ್ಕೆ ಕೈಹಾಕಿ, ಅದರಲ್ಲಿ ತಲ್ಲೀನನಾದ. ನಂದಕಿಶೋರ ಮೆತ್ತಗೆ ಅಲ್ಲಿಂದೆದ್ದು ಕ್ಯಾಶ್ ಕೌಂಟರಲ್ಲಿ ಕುಳಿತಿದ್ದ ಹೋಟೆಲಿನ ಯಜಮಾನರಾದ ಶ್ರೀನಿವಾಸಣ್ಣನ ಬಳಿ, 'ಅಲ್ಲಿ ಕುಳಿತವರಿಗೆ ತಿಂಡಿ ತಿಂದಾದ ಮೇಲೆ ಟೀಯೋ ಕಾಫಿಯೋ ಅವರಿಗೆ ಬೇಕಾದ್ದು ಕೊಡಿ. ನಮ್ಮಿಬ್ಬರ ಬಿಲ್ಲು ಒಟ್ಟಿಗೆ ನಾನು ಆಮೇಲೆ ಕೊಡುತ್ತೇನೆ. ಹಣ ಮನೆಯಲ್ಲಿ ಬಿಟ್ಟುಬಂದೆ, ಮತ್ತೆ ನಾನೇ ಕೊಡುತ್ತೇನೆ. ಅವರಿಂದ ತಕ್ಕೊಳ್ಳಬೇಡಿ...' ಎಂದು ಹೇಳಿ ಹೋಟೆಲಿನಿಂದ ಹೊರಗೆ ಬಂದ. ಊರಿನಲ್ಲಿ ಈ ಬಗೆಯ ಬಾಯಿಮಾತಿನ ಸಾಲಗಳೆಲ್ಲ ಸಾಮಾನ್ಯ. ಹೀಗೆ ಸಾಲ ಮಾಡಿ, ಮತ್ತೆ ಕೊಡುವುದಕ್ಕೆ ಮರೆತುಬಿಟ್ಟರೆ ಅಂಗಡಿಯವರು ನೆನಪಿಸಿ, ದಾಕ್ಷಿಣ್ಯವಿಲ್ಲದೆ ವಸೂಲು ಮಾಡುತ್ತಾರೆ ಕೂಡ.

ರಾಜ ಮಸಾಲೆ ದೋಸೆ ತಿಂದು ನಂದಕಿಶೋರನಿಗಾಗಿ ಅತ್ತಿತ್ತ ತಿರುಗಿ ನೋಡಿದ. ವಸಂತನನ್ನು ಕರೆದು, 'ಈ ಜನ ಎಲ್ಲಿಗೆ ಹೋಯಿತು?' ಎಂದು ವಿಚಾರಿಸಿದ.

'ಈಗ ಬರುತ್ತೇನೆ ಎಂದು ಹೊರಗೆ ಹೋದರು. ನಿಮಗೆ ಕಾಫಿಯೋ ಟೀಯೋ?'

'ಕಾಫಿ ಕೊಡು, ಸ್ಪೆಷಲ್' ಎಂದ ರಾಜ.

ಕಾಫಿ ಬಂತು. ಸ್ವಲ್ಪ ಸಂಶಯದಿಂದಲೇ ಅತ್ತ ಇತ್ತ ನೋಡುತ್ತ ರಾಜ ಕಾಫಿ ಕುಡಿದ. ಕ್ಯಾಶ್ ಕೌಂಟರ್ ಬಳಿಗೆ ಬಂದು, ಅಲ್ಲಿದ್ದ ಯಜಮಾನರ ಹತ್ತಿರ, 'ನಮ್ಮ ಫ್ರೆಂಡ್ ಎಲ್ಲಿ ಹೋದರು ಮಾರಾಯರೆ?' ಎಂದು ಕೇಳಿದ.

ಯಜಮಾನರಾದ ಶ್ರೀನಿವಾಸಣ್ಣ, 'ನಿಮ್ಮ ಬಿಲ್ಲು ಅವರೇ ಕೊಡುತ್ತಾರಂತೆ. ಮತ್ತೆ ಬರುತ್ತೇನೆ ಎಂದು ಹೇಳಿ ಅರ್ಜೆಂಟಿನಲ್ಲಿ ಹೋದರು' ಎಂದರು. ರಾಜನಿಗೆ ಪರಿಸ್ಥಿತಿಯ ಅರಿವಾಯಿತು. ಹೋಟೆಲಿನಿಂದ ಹೊರಗೆ ಬಂದು ಆ ಸಣ್ಣಪೇಟೆಯ ಒಂದು ಮೂಲೆಯಲ್ಲಿ ನಿಂತು ಮುಂದಿನ ದಾರಿ ಹೇಗೆ ಎಂದು ಯೋಚಿಸತೊಡಗಿದ.

ಮನೆಯಲ್ಲಿ ಬಡತನವಿದ್ದರೂ ನಂದಕಿಶೋರ ಇಂಗ್ಲಿಷ್ ಎಂ.ಎ ಮಾಡಲು ಮೈಸೂರಿಗೆ ಹೋದದ್ದೇ ಒಂದು ಆಶ್ಚರ್ಯ. ಆ ಕಾಲಕ್ಕೆ ಹಳ್ಳಿಯ ಬಡ ಹುಡುಗನಿಗೆ ಅಷ್ಟು ಧೈರ್ಯ ಬಂದದ್ದೂ ವಿಶೇಷ. ಅವನ ಕಾಲೇಜು ಅಧ್ಯಾಪಕ ಭುವನಪ್ರಸಾದ್ ಎಂಬುವರು ಅವನ ಬಗ್ಗೆ ಆಸಕ್ತಿ ವಹಿಸಿ ಮೈಸೂರಿಗೆ ಕರೆದುಕೊಂಡು ಹೋಗಿ, ಇಂಗ್ಲಿಷ್ ಡಿಪಾರ್ಟ್ಮೆಂಟಿನಲ್ಲಿ ದಾಖಲು ಮಾಡಿಸಿದ್ದರು. ಅವರೇ ಯಾರನ್ನೋ ವಿಚಾರಿಸಿ, ಕೃಷ್ಣವಿಲಾಸ ಹೋಟೆಲಿನ ರಾಮಚಂದ್ರ ರಾಯರ ಬಳಿಗೂ ಕರೆದುಕೊಂಡು ಹೋಗಿ, 'ಈ ಹುಡುಗನಿಗೆ ನಿಮ್ಮ ಹೋಟೆಲಿನಲ್ಲಿ ಬೆಳಗ್ಗೆ ಸಂಜೆ ಕೆಲಸ ಮಾಡಿಕೊಂಡು ಕಾಲೇಜಿಗೆ ಹೋಗಲು ಅವಕಾಶ ಕೊಡಿ' ಎಂದು ವಿನಂತಿಸಿಕೊಂಡಿದ್ದರು.

ರಾಮಚಂದ್ರ ರಾಯರು ಸಿಟ್ಟಿನ ಮನುಷ್ಯ ಎಂದು ಎಲ್ಲರಿಗೂ ಗೊತ್ತಿತ್ತು. ಹಾಗಾಗಿ ಅವರ ಬಳಿ ಮಾತಾಡುವುದು ಅಷ್ಟು ಸುಲಭವಾಗಿರಲಿಲ್ಲ. ಭುವನಪ್ರಸಾದರಿಗೂ ಅವರ ಪರಿಚಯ ಇರಲಿಲ್ಲ. ಕೆಮುಂಡೆಲಿನವರು ಎನ್ನುವುದಷ್ಟೆ ಗೊತ್ತಿತ್ತು. ಆದರೂ ಧೈರ್ಯವಹಿಸಿ ತಮ್ಮ ಬಗ್ಗೆ ಮತ್ತು ನಂದಕಿಶೋರನ ಬಗ್ಗೆ ರಾಯರ ಬಳಿ ಹೇಳಿಕೊಂಡರು.

ರಾಮಚಂದ್ರ ರಾಯರು ಏನೂ ಉತ್ತರಿಸಲಿಲ್ಲ; ಇಬ್ಬರನ್ನೂ ಸ್ವಲ್ಪ ಹೊತ್ತು ನೋಡಿದರು. 'ಹೋಗಿ